## ಚಿಟ್ಟೆಯಲ್ಲ, ನಾಯಿಯಲ್ಲ ಮನುಷ್ಯ! ನೂರಾರು ವರ್ಷ ಬಾಳಿ ಬದುಕಬಲ್ಲ ಪ್ರಕೃತಿಯ ಅದ್ಭುತ ಸೃಷ್ಟಿ!! ಎಂದುಕೊಂಡು ನೀರು ಕುಡಿಯಲು ಬಗ್ಗಿದಾಗ...

ಮುದಿದಾರ್ಶನಿಕನೊಬ್ಬ ಒಂದು ದಿನ ಲೋಕರಹಸ್ಯಗಳನ್ನು ಆಳವಾಗಿ ಚಿಂತಿಸುತ್ತ ಒಂದು ಪುಷ್ಪೋದ್ಯಾನದಲ್ಲಿ ಕಾಲದ ಪರಿವೆಯಿಲ್ಲದೇ ಠಳಾಯಿಸುತ್ತಿದ್ದಾಗ, ವಿಪರೀತ ಬಳಲಿ ಒಂದು ಮರದ ಕೆಳಗಿನ ಶಿಲಾಪೀಠದ ಮೇಲೆ ಒರಗಿ ಕುಳಿತು ಕತ್ತೆತ್ತಿ ನೋಡಿದ. ಅವನೆಂದೂ ಕಾಣದ ಬೃಹದಾಕಾರದ ವರ್ಣಮಯ ಚಿಟ್ಟೆಯೊಂದು ಹಾರಿಬಂದು ಹೂವಿನ ಮೇಲೆ ಕುಳಿತುಕೊಂಡಿತು. ಅದು ಎಷ್ಟು ದೊಡ್ಡದಿತ್ತೆಂದರೆ ಅವನಿಗೆ ತನ್ನ ಊಟದ ಹರಿವಾಣದ ನೆನಪಾಗಿ, ಹೊಟ್ಟೆ ಹಸಿದಿದೆ ಎಂಬ ಜ್ಞಾನೋದಯವಾಯಿತು. ಆದರೂ ಚಿಂತನೆಗಳ ಭಾರದಿಂದ ಬಸವಳಿದ ದಾರ್ಶನಿಕ ಕೂತಲ್ಲೇ ಕಣ್ಣುಮುಚ್ಚಿ ಬೌದ್ಧಿಕ ಕಸರತ್ತುಗಳನ್ನು ಮುಂದುವರಿಸಿದ. ಅತ್ಯಂತ ಆಕರ್ಷಕವಾದ ಬೃಹದಾಕಾರದ ಈ ಚಿಟ್ಟೆ ಮತ್ಸ್ಯ, ಕೂರ್ಮ, ವರಾಹ ಇತ್ಯಾದಿಗಳಂತೆಯೇ ಒಂದು ಅವತಾರವಿರಬಹುದೇ? ಚಿಟ್ಟೆ ಅವನ ತಲೆಯ ಸುತ್ತ ವೃತ್ತಾಕಾರವಾಗಿ ಹಾರಾಡುತ್ತಾ ಅವನ ತಲೆ, ಮುಖ ಮತ್ತು ಭುಜಗಳ ಮೇಲೆ ರೆಕ್ಕೆಗಂಟಿಸಿಕೊಂಡಿದ್ದ ಬಣ್ಣ ಬಣ್ಣದ ದೂಳನ್ನು ಸಿಂಪಡಿಸಿ ಅಭಿಷೇಕ ಮಾಡಿತು. ಅವನೊಂದು ಬಣ್ಣದ ಮೋಡದಲ್ಲಿ ಲಯವಾಗುತ್ತಿದ್ದ, ಕಿವಿಯೊಳಗೆ ಸ್ಪಂದನರಹಿತ ಅನಾಹತ ಶಬ್ದ ವಿಶೇಷವೊಂದು ಮೊಳಗಿತು.

ಆಗ ಮುಚ್ಚಿದ ಕಣ್ಣು ರೆಪ್ಪೆಯ ಒಳಗೆ ಅದೇ ಹರಿವಾಣದಾಕಾರದ ಬಣ್ಣದ ಚಿಟ್ಟೆ ಬಂದು ರೆಕ್ಕೆಗಳನ್ನು ಪಟಗುಟ್ಟಿಸಿತು. ಅವನಿಗೆ ಒಂದು ಮಿಂಚು ಹೊಡೆದಂತಾಗಿ, ತಾನೇ ಒಂದು ಚಿಟ್ಟೆಯಾಗಿಬಿಟ್ಟೆನೋ ಎಂಬ ಕುತೂಹಲಕಾರಿ ಸಂಭಾವ್ಯತೆಯ ಸುಳಿಯಲ್ಲಿ ಬಿದ್ದ. ದಾರ್ಶನಿಕ ಕರಗುತ್ತಿದ್ದ. ಮತ್ತೊಂದು ಮಿಂಚು ಹೊಡೆದಂತಾಗಿ ತಾನು ಚಿಟ್ಟೆಯಾದ ದಾರ್ಶನಿಕನೋ ಅಥವಾ ದಾರ್ಶನಿಕನೆಂಬ ಭ್ರಮೆಯ ಸುಳಿಯಲ್ಲಿ ಸಿಲುಕಿಕೊಂಡು ರೆಕ್ಕೆ ಪಟಗುಟ್ಟಿಸುವ ಚಿಟ್ಟೆಯೋ, ಎಂಬ